**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.320/2020**

**ಪಿ.ಡಬ್ಲ್ಯೂಃ 1**

**ಸಿ.ಡಬ್ಲ್ಯೂಃ 1**

**ಸಾಕ್ಷಿದಾರರ ಹೆಸರು** ಃ ಪ್ರಕಾಶ

**ತಂದೆಯ ಹೆಸರು** ಃ ಮಂಜಪ್ಪ

**ವಯಸ್ಸು** ಃ 33 ವರ್ಷ

**ಉದ್ಯೋಗ** ಃ ವ್ಯವಸಾಯ

**ವಾಸಸ್ಥಳ** ಃ ಕೆಂಚಿಕೊಪ್ಪ ಗ್ರಾಮ

**ದಿನಾಂಕಃ 27-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ**

ದಿಃ *14-07-2019* ರಂದು ಸಂಜೆ *8-30* ರ ಸಮಯದಲ್ಲಿ ಲಕ್ಕವಳ್ಳಿಯಿಂದ ಕೆಂಚಿಕೊಪ್ಪ ಗ್ರಾಮಕ್ಕೆ ಬರುವ ರಸ್ತೆಯಲ್ಲಿನ ಮಟನ್ ಸ್ಟಾಲ್ ಬಳಿ ಕೆಎ *18* ವಿ *1893* ಸಂಖ್ಯೆಯ ದ್ವಿಚಕ್ರ ವಾಹನವು ಚಾಸಾ-*12* ಹಾಗೂ ನನ್ನ ತಂದೆಯಾದ ಮಂಜಪ್ಪ ನವರು ನಿಲ್ಲಿಸಿದ್ದ ಬೈಕು ಮತ್ತು ಅವರಿಗೆ ಅಪಘಾತಪಡಿಸಿದ್ದು, ನ್ಯಾಯಾಲಯದ ಮುಂದಿರುವ ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯಿಂದ ತನ್ನ ಬೈಕನ್ನು ಚಲಾಯಿಸಿದ್ದಕ್ಕೆ ಅಪಘಾತವಾಗಿರುತ್ತದೆ. ಅಪಘಾತವಾದ ನಂತರ ನನ್ನ ತಂದೆಯಾದ ಮೃತ ಮಜಪ್ಪನವರಿಗೆ ತಲೆಗೆ, ಮೈ ಕೈ, ಮತ್ತು ಕಿವಿ ಭಾಗದಲ್ಲಿ ತುಂಬಾ ಪೆಟ್ಟಾಗಿರುತ್ತದೆ. ತುಂಬಾ ರಕ್ತಸ್ರಾವ ಆಗಿರುತ್ತದೆ. ನನ್ನ ತಂದೆಯನ್ನು ಚಾಸಾ-*10* ಮತ್ತು *11* ರವರು ಲಕ್ಕವಳ್ಳಿಯ ಬಸವೇಶ್ವರ ಆಸ್ಪತ್ರೆಗೆ ಸೇರಿಸಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನನ್ನ ತಂದೆಗೆ ಕಿವಿಯಿಂದ ತುಂಬಾ ರಕ್ತಸ್ರಾವ ಆಗಿದ್ದಕ್ಕೆ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ನನಗೆ ಚಾಸಾ-*12* ರವರು ಫೋನ್ ಮೂಲಕ ಅಪಘಾತದ ವಿಷಯವನ್ನು ತಿಳಿಸಿದರು. ಆಗ ನಾನು ಸ್ಥಳಕ್ಕೆ ಹೋಗಿರುತ್ತೇನೆ. ದಿಃ *15-07-2019* ರಂದು ಅಪಘಾತದ ಬಗ್ಗೆ ನಾನು ಆರೋಪಿಯ ವಿರುದ್ಧ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-*1* ಎಂದು, ಸಾಕ್ಷಿಯ ಸಹಿಯನ್ನು ನಿಪಿ-*1(ಎ)* ಎಂದು ಗುರುತಿಸಲಾಯಿತು. ಸಾಕ್ಷಿಯು ಶವಪಂಚನಾಮೆ ಸಮಯದಲ್ಲಿ ತೆಗೆದ ಫೋಟೋದಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-*2* ಎಂದು ಗುರುತಿಸಲಾಯಿತು. ಸಾಕ್ಷಿಯು ಹಣ ಸಂದಾಯ ರಸೀದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-*3* ಎಂದು, ಸಾಕ್ಷಿಯ ಸಹಿಯನ್ನು ನಿಪಿ-*3(ಎ)* ಎಂದು ಗುರುತಿಸಲಾಯಿತು.

***<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ಸಿ ಬಿ ವಿ ವಕೀಲರಿಂದ.</u>***

ಚಾಸಾ-*12* ರವರು ನಮಗೆ ಸಂಬಂಧಿಕರಲ್ಲ. ಚಾಸಾ-*12* ರವರು ಚಲಾಯಿಸುತ್ತಿದ್ದ ಬೈಕು ಅವರಿಗೆ ಸೇರಿದ್ದು. ಚಾಸಾ-*12* ರವರಿಗೆ ವಾಹನ ಚಾಲನಾ ಪರವಾನಗಿ ಇದೆ. ನಾನು ಅಪಘಾತ ನೋಡಿಲ್ಲ ಎಂದರೆ ಸರಿ. ಚಾಸಾ-*12* ರವರೇ ಅತಿವೇಗವಾಗಿ ವಾಹನ ಚಲಾಯಿಸಿ ನನ್ನ ತಂದೆಯನ್ನು ಬೀಳಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ-*12* ರವರು ಬೈಕಿನಿಂದ ನಮ್ಮ ತಂದೆಯನ್ನು ಬೀಳಿಸಿದ್ದರಿಂದ ಅವರಿಗೆ ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಚಾಸಾ-*12* ರವರು ವಾಹನವನ್ನು ರಸ್ತೆ ಬದಿ ನಿಲ್ಲಿಸಿ ಮೂತ್ರ ವಿಸರ್ಜನೆಗೆ ಹೋಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಅಜಾಗರೂಕತೆ ಮತ್ತು ಅತಿವೇಗದಿಂದ ಬೈಕ್ ಚಲಾಯಿಸಿ ನನ್ನ ತಂದೆಗೆ ಡಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-*12* ರವರು ಓಡಿಸುತ್ತಿದ್ದ ಬೈಕಿಗೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ-*12* ರವರು ತಮ್ಮ ಅಜಾಗರೂಕತೆ ಚಾಲನೆಯಿಂದ ಬೈಕನ್ನು ಬೀಳಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ-*12* ರವರ ಬೈಕಿಗೂ ಹಾಗೂ ಆರೋಪಿಯ ಬೈಕಿಗೂ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಚಾಸಾ-*12* ರವರ ಬೈಕಿಗೆ ವಿಮೆ ಇರಲಿಲ್ಲ ಎನ್ನುವ ಕಾರಣಕ್ಕೆ ಪರಿಹಾರ ಪಡೆಯಲು ಆರೋಪಿಯ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ಆರೋಪಿಯ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u> ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***